ಕರ್ನಾಟಕ ಸರ್ಕಾರ

ಮೇ 15, 2017

## ಮಾಜಿ ಶಾಸಕ ರಾಮಪ್ಪ ಮಳೆಪ್ಪ ಕಲೂತಿ ಅವರ ನಿಧನಕ್ಕೆ ಮುಖ್ಯಮಂತ್ರಿ ಶೋಕ

**ಬೆಂಗಳೂರು, ಮೇ 15:**

ಜಮಖಂಡಿಯ ಮಾಜಿ ಶಾಸಕ ರಾಮಪ್ಪ ಮಳೆಪ್ಪ ಕಲೂತಿ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಬಡ ಕೃಷಿಕ ಕುಟುಂಬದಲ್ಲಿ ಜನಿಸಿದ್ದ ರಾಮಣ್ಣ ಮಳೆದ ಕಲೂತಿ ಅವರು 1989, 1994 ಮತ್ತು 1999 ನಲ್ಲಿ ನಡೆದ ರಾಜ್ಯ ವಿಧಾನ ಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಹ್ಯಾಟ್ರಿಕ್ ಗೆಲುವು ಸಾಧಿಸಿ ಜನಪ್ರಿಯ ಜನಪ್ರತಿನಿಧಿಯಾಗಿ ಎಲ್ಲರ ಗಮನ ಸೆಳೆದಿದ್ದರು.

ಜನರ ಕಷ್ಟ-ಸಂಕಷ್ಟಗಳಿಗೆ ಸದಾ ಸ್ಪಂದಿಸುತ್ತಿದ್ದ ರಾಮಣ್ಣ ಮಳೆದ ಕಲೂತಿ ಅವರು ಜಮಖಂಡಿ ನಗರದಲ್ಲಿ ಶಾಶ್ವತ ಕುಡಿಯುವ ನೀರು ಸರಬರಾಜು ಯೋಜನೆಗೆ ವಿಶೇಷವಾಗಿ ಶ್ರಮಿಸಿದ್ದರು. ಜಮಖಂಡಿ ನಗರ ಸಹಕಾರ ಬ್ಯಾಂಕ್‌ನ ಅಧ್ಯಕ್ಷರಾಗಿ ಬ್ಯಾಂಕ್‌ನ ಬೆಳವಣಿಗೆಗೆ ಪ್ರಮುಖ ಪಾತ್ರ ವಹಿಸಿದ್ದರು. ತಮಗಿದ್ದ ಇಬ್ಬರು ಗಂಡು ಮಕ್ಕಳೂ ಮೃತರಾದದ್ದು ರಾಮಪ್ಪ ಮಳೆಪ್ಪ ಕಲೂತಿ ಅವರಲ್ಲಿ ನೋವಿನ ಸಾಗರವನ್ನೇ ಸೃಷ್ಟಿಸಿತ್ತು. ತಮ್ಮ ಮಕ್ಕಳ ಅಗಲಿಕೆಯ ಕೊರಗಿನಲ್ಲೇ ಸ್ನೇಹ-ಮಯಿ ರಾಮಪ್ಪ ಮಳೆಪ್ಪ ಕಲೂತಿ ಅವರು ತಮ್ಮ ಕೊನೆಗಾಲ ಕಳೆಯುವಂತಾದದ್ದು ದುರದೃಷ್ಟಕರ ಎಂದು ಸಿದ್ದರಾಮಯ್ಯ ಅವರು ಕಂಬನಿ ಮಿಡಿದಿದ್ದಾರೆ.

ರಾಮಪ್ಪ ಮಳೆಪ್ಪ ಕಲೂತಿ ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ. ಶ್ರೀಯುತರ ಅಗಲಿಕೆಯಿಂದ ಉಂಟಾದ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ಕರುಣಿಸಲಿ ಎಂದು ಮುಖ್ಯಮಂತ್ರಿ ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ.

*********

ಡಿ ಪಿ ಎಂ